## Kannada Prabha

**Date:** 23-08-2018 Page No: 05

Edition: Bangalore Language: Kannada

# ಇಂದು ಹೂಡಿಕೆ ಜಾಗೃತಿ ಕಾರ್ಯಕ್ರಮ

ಮೈಸೂರು,ಆ.೨೨- ಎಸ್‌ಡಿಎಂಐಎಂಡಿ, ಎನ್‌ಎಸ್‌ಇ ಮತ್ತು ಎನ್‌ಎಸ್‌ಡಿಎಲ್ ಸಹಯೋಗದೊಂದಿಗೆ ಆ.೨೩ ರಂದು ಎಸ್‌ಡಿಎಂಐಎಂಡಿ ಸಂಸ್ಥೆಯಲ್ಲಿ ಬಂಡವಾಳ ಮಾರುಕಟ್ಟೆಯಲ್ಲಿ ಹಣ ಹೂಡುವ ಬಗ್ಗೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಎಸ್‌ಡಿಎಂಐಎಂಡಿ ಪ್ರಾಧ್ಯಾಪಕ ಡಾ.ಎಂ.ಶ್ರೀರಾವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ ೬ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಬಂಡವಾಳ ಹೂಡಿಕೆಯ ವಿವಿಧ ಆಯಾಮಗಳ ಕುರಿತು ಚರ್ಚೆ ಮತ್ತು ಸಂವಾದ ನಡೆಯಲಿವೆ. ಸಂಪನ್ಮೂಲ ವ್ಯಕ್ತಿಗಳಾಗಿ ಇಂಟಿಗ್ರೇಟೆಡ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಎಜಿಎಂ ಚೇತನ್ ಆನಂದ್ ಹಾಗೂ ಎನ್‌ಎಸ್‌ಇ, ಎನ್‌ಎಸ್‌ಡಿಎಲ್‌ನ ಅಧಿಕಾರಿಗಳು ಭಾಗವಹಿಸಿ ವಿಷಯ ಮಂಡಿಸುವರು.

ಆಸಕ್ತರು ವಿವರಗಳಿಗೆ ಮೊ.ಸಂ.೯೦೩೬೮೯೬೩೬೬, ೯೯೦೨೦೨೫೬೨೪ ಅನ್ನು ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಕಾಲೇಜಿನ ಗ್ರಂಥಪಾಲಕ ಡಾ.ಸುನಿಲ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.